# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2371 |
| ಮಾನ್ಯ ಸದಸ್ಯರ ಹೆಸರು | : | ಡಾ.ಎಂ.ಜಿ.ಮುಳೆ |
| ಉತ್ತರಿಸುವ ದಿನಾಂಕ | : | 27.03.2026 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಸಚಿವರು |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಳೆದ ಮೂರು ಹಣಕಾಸು ವರ್ಷಗಳಲ್ಲಿ (2023-24 ರಿಂದ 2025-26 ರವರೆಗೆ) ಬೀದರ್ ಜಿಲ್ಲೆಗೆ Scheduled Caste Sub Plan (SCSP) ಅಡಿಯಲ್ಲಿ ಬಿಡುಗಡೆಗೊಂಡ ಒಟ್ಟು ಅನುದಾನದ ಮೊತ್ತ ಎಷ್ಟು (ವರ್ಷವಾರು ವಿವರ ನೀಡುವುದು)?</td><td>ಕಳೆದ ಮೂರು ವರ್ಷಗಳಲ್ಲಿ ಬೀದರ್ ಜಿಲ್ಲೆಗೆ ಎಸ್.ಸಿ.ಎಸ್.ಪಿ ಯೋಜನೆಯಡಿ ಬಿಡುಗಡೆಯಾದ ಅನುದಾನದ ವಿವರ ವರ್ಷಾವಾರು ಈ ಕೆಳಕಂಡಂತಿದೆ.<br><br>(ರೂ.ಲಕ್ಷಗಳಲ್ಲಿ)
<table>
<tr><th>ಕ್ರ. ಸಂ</th><th>ವರ್ಷ</th><th>ಬಿಡುಗಡೆಯಾದ ಅನುದಾನ</th></tr>
<tr><td>1</td><td>2023-24</td><td>10838.52</td></tr>
<tr><td>2</td><td>2024-25</td><td>15998.51</td></tr>
<tr><td>3</td><td>2025-26</td><td>9201.77</td></tr>
</table></td></tr>
<tr><td>ಆ)</td><td>ಜಿಲ್ಲೆಯ ವಿವಿಧ ಇಲಾಖೆಗಳಾದ ಲೋಕೋಪಯೋಗಿ, ಸಮಾಜ ಕಲ್ಯಾಣ, ಶಿಕ್ಷಣ ಇತ್ಯಾದಿಗಳಿಗೆ ಹಂಚಿಕೆಯಾದ ಈ ಅನುದಾನದಲ್ಲಿ ವಾಸ್ತವವಾಗಿ ವೆಚ್ಚ ಮಾಡಲಾದ ಶೇಕಡಾವಾರು (percentage of Utilization) ಎಷ್ಟು; (ಇಲಾಖೆವಾರು ಹಾಗೂ ವರ್ಷವಾರು ವಿವರ ನೀಡುವುದು)</td><td>ಬೀದರ್ ಜಿಲ್ಲೆಯ ವಿವಿಧ ಇಲಾಖೆಗಳಿಗೆ ಕಳೆದ ಮೂರು ವರ್ಷಗಳಲ್ಲಿ ಹಂಚಿಕೆಯಾದ ಮತ್ತು ವೆಚ್ಚ ಮಾಡಲಾದ SCSP ಅನುದಾನದ ಶೇಕಡಾವಾರು ವಿವರವನ್ನು ಅನುಬಂಧ-1ರಲ್ಲಿ ನೀಡಲಾಗಿದೆ.</td></tr>
<tr><td>ಇ)</td><td>ಜಿಲ್ಲೆಯಲ್ಲಿ SCSP ಅನುದಾನ ಸಂಪೂರ್ಣವಾಗಿ ಬಳಕೆಯಾಗದೆ ಉಳಿದಿರುವ (Unspent Balance) ಮೊತ್ತ ಎಷ್ಟು; ಈ ಅನುದಾನವನ್ನು ಮುಂದಿನ ಹಣಕಾಸು ವರ್ಷಕ್ಕೆ ಮುಂದುವರಿಸಲಾಗುತ್ತದೆಯೇ ಅಥವಾ ಆಯಾ ವರ್ಷದಲ್ಲೇ ಲ್ಯಾಪ್ಸ್ (Lapse) ಆಗುತ್ತಿದೆಯೇ;</td><td>ಜಿಲ್ಲೆಯಲ್ಲಿ ಬಳಕೆಯಾಗದೇ ಉಳಿಕೆಯಾದ SCSP ಅನುದಾನ ವಿವರ ಕೆಳಗಿನಂತಿದೆ.<br><br>(ರೂ.ಲಕ್ಷಗಳಲ್ಲಿ)
<table>
<tr><th>ಕ್ರ. ಸಂ</th><th>ವರ್ಷ</th><th>ಉಳಿಕೆಯಾದ ಅನುದಾನ</th></tr>
<tr><td>1</td><td>2023-24</td><td>991.00</td></tr>
<tr><td>2</td><td>2024-25</td><td>1710.00</td></tr>
<tr><td>3</td><td>2025-26</td><td>2084.00</td></tr>
</table>
ಆರ್ಥಿಕ ಇಲಾಖೆಯಿಂದ ವಿವಿಧ ಅಭಿವೃದ್ಧಿ ಯೋಜನೆಯಡಿ ಹಂಚಿಕೆ ಮಾಡಿರುವ ಅನುದಾನವು ಖರ್ಚಾಗದೆ ಉಳಿದ ಸಂದರ್ಭದಲ್ಲಿ, ಲೆಕ್ಕ</td></tr>
</table>

---2

| | | |
|---|---|---|
| | | ಪರಿಶೋಧನೆಯಾದ ಬಳಿಕ ಅದರ ಮುಂದಿನ ಹಣಕಾಸು ವರ್ಷದ ತರುವಾಯದ ಹಣಕಾಸು ವರ್ಷಕ್ಕೆ ಸೇರ್ಪಡೆಯಾಗುತ್ತದೆ. ಬಳಕೆಯಾಗದೇ ಉಳಿದ ಅನುದಾನದಲ್ಲಿ 1/3 ಭಾಗ ಸಮಾಜ ಕಲ್ಯಾಣ ಇಲಾಖೆಗೆ ಹಾಗೂ 2/3 ಭಾಗ ಆಯಾ ಇಲಾಖೆಗೆ ಹಂಚಿಕೆಯಾಗುತ್ತದೆ. ಆದರೆ ಆ ವರ್ಷ ಮೀರಿದ ನಂತರ ಅದನ್ನು ಮುಂದುವರೆಸಲಾಗುವುದಿಲ್ಲ. |
| ಈ) | SCSP ಅಡಿಯಲ್ಲಿ ಕಾಮಗಾರಿಗಳು ಅಥವಾ ಯೋಜನೆಗಳನ್ನು ಆಯ್ಕೆಮಾಡುವ ಪ್ರಕ್ರಿಯೆಯಲ್ಲಿ ಸಾರ್ವಜನಿಕರು ಅಥವಾ ಸ್ಥಳೀಯ ಜನಪ್ರತಿನಿಧಿಗಳು ಭಾಗವಹಿಸುವಿಕೆ ಇದೆಯೇ; ಈ ಕುರಿತು ಜಿಲ್ಲಾಮಟ್ಟದ ಸಮಿತಿಗಳಲ್ಲಿ ತೆಗೆದುಕೊಳ್ಳಲಾದ ತೀರ್ಮಾನಗಳ ವಿವರವೇನು; | ಜಿಲ್ಲಾಧಿಕಾರಿಗಳವರ ಅಧ್ಯಕ್ಷತೆಯಲ್ಲಿನ ಜಿಲ್ಲಾ ಮೇಲ್ವಿಚಾರಣ ಸಮಿತಿಯಲ್ಲಿ ಇಲಾಖೆಗಳಿಗೆ SCSP ಅಡಿ ಹಂಚಿಕೆಯಾದ ಅನುದಾನದ ಪ್ರಗತಿ ವಿವರಗಳನ್ನು ಪ್ರತಿ ಮಾಹೆ ಪರಿಶೀಲಿಸಲಾಗುತ್ತಿದೆ. ಜಿಲ್ಲೆಯೊಳಗೆ ಚುನಾವಣಾ ಕ್ಷೇತ್ರವನ್ನು ಹೊಂದಿರುವ ಜಿಲ್ಲೆಯ ಒಂದು ಭಾಗವನ್ನು ಅಥವಾ ಪೂರ್ತಿ ಜಿಲ್ಲೆಯನ್ನು ಪ್ರತಿನಿಧಿಸುವ ವಿಧಾನಸಭಾ ಸದಸ್ಯರು ಮತ್ತು ಜಿಲ್ಲೆಯೊಳಗೆ ಮತದಾರರೆಂದು ನೊಂದಾಯಿತರಾದ ವಿಧಾನ ಪರಿಷತ್ತಿನ ಸದಸ್ಯರು ಸದರಿ ಸಮಿತಿಯ ಸದಸ್ಯರಾಗಿರುತ್ತಾರೆ.<br><br>ಸಾರ್ವಜನಿಕರು ಈ ಸಮಿತಿಯ ಸದಸ್ಯರಾಗಿರುವುದಿಲ್ಲ. ಆಯಾ ಅಭಿವೃದ್ಧಿ ಇಲಾಖೆಗಳು ಅನುಷ್ಠಾನ ಮಾಡುತ್ತಿರುವ ಯೋಜನೆಗಳಡಿ ನಿಗಧಿಪಡಿಸಿದ ಮಾನದಂಡಗಳಿಗೆ ಅನುಸಾರವಾಗಿ ಕಾಮಗಾರಿಗಳು ಅಥವಾ ಯೋಜನೆಗಳನ್ನು ಆಯ್ಕೆ ಮಾಡುವ ಪ್ರಕ್ರಿಯೆ ನಡೆಸಲಾಗುತ್ತದೆ. |
| ಉ) | ಕಳೆದ ಮೂರು ವರ್ಷಗಳಲ್ಲಿ ಜಿಲ್ಲೆಯಲ್ಲಿ SCSP ಅನುದಾನದ ದುರುಪಯೋಗ (Misappropriation) ಅಥವಾ ನಿಯಮಬಾಹಿರ ಬಳಕೆ ಕುರಿತು ದಾಖಲಾಗಿರುವ ಪ್ರಕರಣಗಳ ಸಂಖ್ಯೆ ಎಷ್ಟು; ಅಂತಹ ಅಧಿಕಾರಿಗಳು ಅಥವಾ ಗುತ್ತಿಗೆದಾರರ ವಿರುದ್ಧ ಸರ್ಕಾರ ಕೈಗೊಂಡಿರುವ ಕಟ್ಟುನಿಟ್ಟಿನ ಕ್ರಮಗಳೇನು? | ಕಳೆದ ಮೂರು ವರ್ಷಗಳಲ್ಲಿ ಎಸ್.ಸಿ.ಎಸ್.ಪಿ / ಟಿ.ಎಸ್.ಪಿ. ಯೋಜನೆಯಡಿ ಅನುದಾನವನ್ನು ದುರ್ಬಳಕೆ ಮಾಡಿರುವ ಕುರಿತು 03 ದೂರುಗಳು ಸ್ವೀಕೃತವಾಗಿದ್ದು, ತನಿಖೆಯಲ್ಲಿ ಎರಡು ದೂರುಗಳಲ್ಲಿ ಆರೋಪಗಳು ಸಾಬೀತಾಗಿರುವುದಿಲ್ಲ. ಇನ್ನೊಂದು ದೂರಿನ ಕುರಿತು ಜಿಲ್ಲಾ ಮಟ್ಟದಲ್ಲಿ ತನಿಖೆ ಕೈಗೊಳ್ಳಲಾಗಿರುತ್ತದೆ. ಸದರಿ ವರದಿಯನ್ನಾಧರಿಸಿ ಮುಂದಿನ ಕ್ರಮ ಜರುಗಿಸಲಾಗುವುದು. |

**ಸಕಇ 190 ಎಸ್‌ಎಲ್ ಪಿ 2026**

**(ಡಾ. ಹೆಚ್.ಸಿ. ಮಹದೇವಪ್ಪ)**
**ಸಮಾಜ ಕಲ್ಯಾಣ ಸಚಿವರು**

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಡಾ.ಎಂ.ಜಿ. ಮುಳೆ, (ವಿಧಾನಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2371 (2097)ಕ್ಕೆ ಅನುಬಂಧ-1

2023-24ನೇ ಸಾಲಿನಲ್ಲಿ ಎಸ್.ಸಿ.ಎಸ್.ಪಿ ಯೋಜನೆಗಳಿಗೆ ಹಂಚಿಕೆಯಾದ ಅನುದಾನದಲ್ಲಿ ವೆಚ್ಚ ಮಾಡಲಾದ ಶೇಕಡವಾರು ಅನುದಾನದ ವಿವರ.

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ಇಲಾಖೆ | ಹಂಚಿಕೆ | ವೆಚ್ಚ | ಹಂಚಿಕೆ ಶೇಕಡ |
|---|---|---|---|---|
| 1 | ಕೃಷಿ ಇಲಾಖೆ | 982.99 | 824.57 | 83.88 |
| 2 | ಪಶುಪಾಲನೆ ಮತ್ತು ಪಶು ವೈದ್ಯ ಸೇವಾ ಇಲಾಖೆ | 21.23 | 21.23 | 100.00 |
| 3 | ಸಹಕಾರ ಇಲಾಖೆ | 3.20 | 3.20 | 100.00 |
| 4 | ಇಂಧನ ಇಲಾಖೆ | 148.12 | 6.76 | 4.56 |
| 5 | ಮೀನುಗಾರಿಕೆ ಇಲಾಖೆ | 6.00 | 6.00 | 100.00 |
| 6 | ಆಹಾರ, ನಾಗರಿಕ ಸರಬರಾಜು & ಗ್ರಾಹಕರ ವ್ಯವಹಾರಗಳ ಇಲಾಖೆ | 475.48 | 475.48 | 100.00 |
| 7 | ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ | 6.46 | 6.46 | 100.00 |
| 8 | ರೇಷ್ಮೆ, ಮತ್ತು ಜವಳಿ ಇಲಾಖೆ | 1.00 | 1.00 | 100.00 |
| 9 | ತೋಟಗಾರಿಕೆ ಇಲಾಖೆ | 92.45 | 91.43 | 98.90 |
| 10 | ವಸತಿ ಇಲಾಖೆ | 1839.00 | 0.00 | 0.00 |
| 11 | ಕನ್ನಡ ಮತ್ತು ಸಂಸ್ಕೃತಿ ಇಲಾಖೆ | 35.71 | 35.71 | 100.00 |
| 12 | ಕಾರ್ಮಿಕ ಇಲಾಖೆ | 2.28 | 0.76 | 33.33 |
| 13 | ಭಾರಿ ನೀರಾವರಿ ಇಲಾಖೆ | 100.00 | 60.37 | 60.37 |
| 14 | ವೈದ್ಯಕೀಯ ಶಿಕ್ಷಣ ಇಲಾಖೆ | 96.00 | 57.86 | 60.27 |
| 15 | ಸಣ್ಣ ನೀರಾವರಿ ಇಲಾಖೆ | 26.26 | 26.26 | 100.00 |
| 16 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | 5388.18 | 3851.09 | 71.47 |
| 17 | ಸಮಾಜ ಕಲ್ಯಾಣ ಇಲಾಖೆ | 4565.29 | 3908.41 | 85.61 |
| 18 | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ (ಸಾರ್ವಜನಿಕ ಶಿಕ್ಷಣ ಇಲಾಖೆ) | 432.47 | 432.35 | 99.97 |
| 19 | ಸಣ್ಣ ಕೈಗಾರಿಕೆ ಇಲಾಖೆ | 9.00 | 9.00 | 100.00 |
| 20 | ಪ್ರವಾಸೋದ್ಯಮ ಇಲಾಖೆ | 7.80 | 7.80 | 100.00 |
| 21 | ನಗರಾಭಿವೃದ್ಧಿ ಇಲಾಖೆ | 183.00 | 21.51 | 11.75 |
| | ಒಟ್ಟು | 14421.92 | 9847.25 | 68.28 |

**2024-25ನೇ ಸಾಲಿನಲ್ಲಿ ಎಸ್.ಸಿ.ಎಸ್.ಪಿ ಯೋಜನೆಗಳಿಗೆ ಹಂಚಿಕೆಯಾದ ಅನುದಾನದಲ್ಲಿ ವೆಚ್ಚ ಮಾಡಲಾದ ಶೇಕಡವಾರು ಅನುದಾನದ ವಿವರ.**

(ರೂ. ಲಕ್ಷಗಳಲ್ಲಿ)

| ಕ್ರ.ಸಂ | ಇಲಾಖೆಗಳ ಹೆಸರು | ಹಂಚಿಕೆ | ವೆಚ್ಚ | ಹಂಚಿಕೆ ಶೇಕಡ |
|---|---|---|---|---|
| 1 | ಕೃಷಿ ಇಲಾಖೆ | 1221.73 | 1053.68 | 86.24 |
| 2 | ತೋಟಗಾರಿಕೆ ಇಲಾಖೆ | 331.43 | 329.87 | 99.53 |
| 3 | ರೇಷ್ಮೆ ಇಲಾಖೆ | 27.44 | 22.50 | 82.00 |
| 4 | ಮೀನುಗಾರಿಕೆ ಇಲಾಖೆ | 6.00 | 6.00 | 100.00 |
| 5 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | 50.00 | 48.77 | 97.54 |
| 6 | ಆಹಾರ ಮತ್ತು ನಾಗರೀಕ ಸೇವಾ ಇಲಾಖೆ | 520.07 | 520.06 | 100.00 |
| 7 | ಕನ್ನಡ ಮತ್ತು ಸಂಸ್ಕೃತಿ ಇಲಾಖೆ | 36.395 | 36.395 | 100.00 |
| 8 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | 670.78 | 75.13 | 11.20 |
| 9 | ಸಮಾಜ ಕಲ್ಯಾಣ ಇಲಾಖೆ | 3683.82 | 3800.36 | 103.16 |
| 10 | ಕೈಮಗ್ಗ ಮತ್ತು ಜವಳಿ ಇಲಾಖೆ | 141.92 | 141.92 | 100.00 |
| 11 | ಕೌಶಲ್ಯಾಭಿವೃದ್ಧಿ ಇಲಾಖೆ | 12.10 | 0.00 | 0.00 |
| 12 | ಕಾರ್ಮಿಕ ಇಲಾಖೆ | 0.00 | 399.92 | 0.00 |
| 13 | ಸಹಕಾರ ಇಲಾಖೆ | 3.20 | 3.20 | 100.00 |
| 14 | ನಗರಾಭಿವೃದ್ಧಿ ಇಲಾಖೆ | 182.00 | 51.94 | 28.54 |
| 15 | ಲೋಕೋಪಯೋಗಿ ಇಲಾಖೆ | 1800.00 | 1150.79 | 63.93 |
| 16 | ಪಂಚಾಯತ್ ರಾಜ್ ಇಂಜಿನಿಯರಿಂಗ್ | 7494.93 | 5431.24 | 72.47 |
| 17 | ಅಕ್ಷರ ದಾಸೋಹ ಯೋಜನೆ ಜಿ.ಪಂ | 738.61 | 738.61 | 100.00 |
| 18 | ಪದವಿ ಪೂರ್ವ ಶಿಕ್ಷಣ ಇಲಾಖೆ | 3.37 | 3.37 | 100.00 |
| 19 | ಉಪ ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ | 86.00 | 0.00 | 0.00 |
| 20 | ಸಣ್ಣ ಪ್ರಮಾಣದ ಕೈಗಾರಿಕೆ | 9.00 | 8.96 | 99.56 |
| 21 | ಭಾರಿ ನೀರಾವರಿ ಇಲಾಖೆ(ಕಾರಂಜಾ ಇಲಾಖೆ) ಬೀದರ -2 ಭಾಲ್ಕಿ | 140.00 | 84.18 | 60.13 |
| 22 | ಸಣ್ಣ ನೀರಾವರಿ ಇಲಾಖೆ | 28.19 | 181.45 | 643.67 |
| 23 | ಸಾರಿಗೆ ಇಲಾಖೆ (ಕ.ಕ.ಆರ್.ಟಿ.ಸಿ) | 60.23 | 60.23 | 100.00 |
| 24 | ಇಂಧನ ಇಲಾಖೆ | 140.00 | 139.98 | 99.99 |
| 25 | ಡಾ॥ ಬಿ.ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ | 160.25 | 0.00 | 0.00 |
| | **ಒಟ್ಟು** | **17547.47** | **14288.56** | **81.43** |

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಡಾ.ಎಂ.ಜಿ. ಮುಳೆ, (ವಿಧಾನಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2371 (2097)ಕ್ಕೆ ಅನುಬಂಧ-1

2025-26ನೇ ಸಾಲಿನಲ್ಲಿ ಎಸ್.ಸಿ.ಎಸ್.ಪಿ ಯೋಜನೆಗಳಿಗೆ ಹಂಚಿಕೆಯಾದ ಅನುದಾನದಲ್ಲಿ ವೆಚ್ಚ ಮಾಡಲಾದ ಶೇಕಡವಾರು ಅನುದಾನದ ವಿವರ. (ಫೆಬ್ರವರಿ-2026ರ ಅಂತ್ಯಕ್ಕೆ)

(ರೂ ಲಕ್ಷಗಳಲ್ಲಿ)

| ಕ್ರ.ಸಂ | ಇಲಾಖೆಗಳ ಹೆಸರು | ಹಂಚಿಕೆ | ವೆಚ್ಚ | ಹಂಚಿಕೆಗೆ % |
|---|---|---|---|---|
| 1 | ಕೃಷಿ ಇಲಾಖೆ | 1094.89 | 860.12 | 78.56 |
| 2 | ತೋಟಗಾರಿಕೆ ಇಲಾಖೆ | 574.25 | 252.94 | 44.05 |
| 3 | ರೇಷ್ಮೆ ಇಲಾಖೆ | 28.18 | 6.60 | 23.42 |
| 4 | ಮೀನುಗಾರಿಕೆ ಇಲಾಖೆ | 6.00 | 6.00 | 100.00 |
| 5 | ಉನ್ನತ ಶಿಕ್ಷಣ | 2.87 | 2.87 | 100.00 |
| 6 | ಕನ್ನಡ ಮತ್ತು ಸಂಸ್ಕೃತಿ ಇಲಾಖೆ | 9.50 | 9.50 | 100.00 |
| 7 | ಪ್ರವಾಸೋದ್ಯಮ ಇಲಾಖೆ | 55.74 | 0.00 | 0.00 |
| 8 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | 802.82 | 223.69 | 27.86 |
| 9 | ಸಮಾಜ ಕಲ್ಯಾಣ ಇಲಾಖೆ | 3629.96 | 2928.59 | 80.68 |
| 10 | ಕೈಮಗ್ಗ ಮತ್ತು ಜವಳಿ ಇಲಾಖೆ | 1.00 | 1.00 | 100.00 |
| 11 | ಕಾರ್ಮಿಕ ಇಲಾಖೆ | 0.00 | 22.14 | 0.00 |
| 12 | ಸಹಕಾರ ಇಲಾಖೆ | 3.20 | 0.92 | 28.75 |
| 13 | ಲೋಕೋಪಯೋಗಿ ಇಲಾಖೆ | 1800.00 | 1459.46 | 81.08 |
| 14 | ಪಂಚಾಯತ್ ರಾಜ್ ಇಂಜಿನಿಯರಿಂಗ್ | 414.80 | 147.52 | 35.56 |
| 15 | ಅಕ್ಷರ ದಾಸೋಹ ಯೋಜನೆ ಜಿ.ಪಂ | 362.55 | 159.20 | 43.91 |
| 16 | ಸಣ್ಣ ನೀರಾವರಿ ಇಲಾಖೆ | 718.29 | 553.43 | 77.05 |
| 17 | ಇಂಧನ ಇಲಾಖೆ | 217.19 | 207.19 | 95.40 |
| 18 | ಡಾ॥ ಬಿ.ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ | 558.75 | 276.50 | 279.66 |
| | ಒಟ್ಟು | 10279.99 | 7117.67 | 69.24 |